ತೆಲುಗು) ಅಲ್ಪಸಂಖ್ಯಾತರ ಶಾಲೆಗಳಿಗೆ ಅವಕಾಶ ಮತ್ತು ಅನುದಾನ ಕೊಟ್ಟರೆ, ಉರ್ದು ಶಾಲೆಗಳು ನಾನಾ ಪ್ರಾಂತಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಹೋಗಿದ್ದವು. ಹೀಗಾಗಿ ಆ ಭಾಷೆಯನ್ನು ಉಪಯೋಗಿಸುವ ಹೆಚ್ಚಿನ ಜನರ ಧರ್ಮದೊಂದಿಗೆ ಅದು ತಳುಕುಹಾಕಿಕೊಂಡಿತು. ಅನಿಲ್ ಈ ಬಗ್ಗೆ ವಿವರವಾಗಿ ತಮ್ಮ ಪುಸ್ತಕದಲ್ಲಿ ಚರ್ಚಿಸುವುದಿಲ್ಲವಾದರೂ, ನಿಜಾಮನ ಆಳ್ವಿಕೆಯಲ್ಲಿದ್ದ ತೆಲಂಗಾಣ ಪ್ರಾಂತಕ್ಕೂ ಮದ್ರಾಸು ಪ್ರೆಸಿಡೆನ್ಸಿಯಲ್ಲಿದ್ದ (ಈಗಿನ ವಿಭಜಿತ) ಆಂಧ್ರಪ್ರದೇಶಕ್ಕೂ ಇದ್ದ ವ್ಯತ್ಯಾಸ ಉರ್ದು ಮತ್ತು ಫಾರಸಿ ಭಾಷೆಗಳ ವ್ಯಾಪಕ ಉಪಯೋಗ, ಮತ್ತು ಸಾಂಸ್ಕೃತಿಕ ಪ್ರತೀಕಗಳಿಂದ ಇದ್ದ ಮೂಲಭೂತ ಭಿನ್ನತೆಗಳೇ ಆಗಿದ್ದವು. ಬಹುಜನರ ಭಾಷೆ ತೆಲುಗೇ ಆದರೂ, ತೆಲಂಗಾಣದ ಭಾಷಾಪ್ರಯೋಗ ಮತ್ತು ಮಿಕ್ಕ ಪ್ರಾಂತದಲ್ಲಿ ಬಳಸುತ್ತಿದ್ದ ಭಾಷೆಗಿಂತ ಭಿನ್ನವಾಗಿತ್ತು. ಧರ್ಮದ ಪ್ರತ್ಯೇಕತೆಗಿಂತ ಭಾಷೆಯ ಪ್ರತ್ಯೇಕತೆಯೇ ಹೆಚ್ಚಿನ ಪ್ರಭಾವವನ್ನು ಹೊಂದಿತ್ತು ಎನ್ನುವುದನ್ನು ನಾವು ಗಮನಿಸಲಿಲ್ಲವೇನೋ?

ಬಾಂಗ್ಲಾದೇಶ ಪಾಕಿಸ್ತಾನದಿಂದ ಭಿನ್ನವಾಗಿ ನಿಂತು ಬೇರೊಂದು ದೇಶವಾಗಲು ಭಾಷೆಯೇ ಮೂಲ ಕಾರಣವೆನ್ನುವುದನ್ನು ನಾವು ಮರೆಯಲಾಗುವುದಿಲ್ಲ. ಪಾಕಿಸ್ತಾನ ಉರ್ದುವನ್ನು ತನ್ನ ರಾಷ್ಟ್ರಭಾಷೆಯನ್ನಾಗಿ ಘೋಷಿಸದೇ, ಅಲ್ಲಿ ಬಹುಸಂಖ್ಯೆಯಲ್ಲಿದ್ದ ಪಂಜಾಬಿ ಮತ್ತು ಸಿಂಧಿ ಭಾಷೆಗಳನ್ನೂ ಅಪ್ಪಿದ್ದರೆ ಉರ್ದು ಭಾಷೆಯ ಸ್ಥಾನ ಇಂದಿಗೆ ಭಿನ್ನವಾಗಿರುತ್ತಿತ್ತೇನೋ?

ಭಾಷೆಯ ವಿಷಯಕ್ಕೆ ಅನಿಲ್ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಉದಾಹರಣೆಯನ್ನು ಕೊಡುತ್ತಾರೆ. ಉತ್ತರ ಪ್ರದೇಶದಲ್ಲಿ ಶೇ. 10ರ ಪ್ರಮಾಣದಲ್ಲಿ ಉರ್ದು ಮಾತೃಭಾಷೆಯ ಜನಸಂಖ್ಯೆಯಿದ್ದರೂ, ಶಾಲೆಗಳಲ್ಲಿ ಉರ್ದು ಕಲಿಯಲು ದಾಖಲಾತಿ ಶೇ. 2.8ರಷ್ಟಿತ್ತು. ಬಿಹಾರದಲ್ಲಿ ಶೇ. 9.8ರ ಜನಸಂಖ್ಯೆ ಮತ್ತು ಅಷ್ಟೇ ದಾಖಲಾತಿಯಿತ್ತು. ಇದಕ್ಕೆ ಕಾರಣಗಳು ಹೀಗಿರಬಹುದು. ಉತ್ತರ ಪ್ರದೇಶದಲ್ಲಿ ಹಿಂದಿ ಕಲಿಯುವುದು ಅನಿವಾರ್ಯವಾಗಿತ್ತು. ಬಿಹಾರದಲ್ಲಿ ಅನೇಕ ಅಲ್ಪಸಂಖ್ಯಾತ ಭಾಷೆಗಳಿದ್ದವು – ಮೈಥಿಲಿ, ಬಂಗಾಲಿ, ಒಡಿಯಾ ಮತ್ತು ಸಂಥಾಲಿ. ಬಿಹಾರ ಸರ್ಕಾರದಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಹೆಚ್ಚಿನ ಸಂಖ್ಯೆಯಲ್ಲಿತ್ತು. ಈ ಎಲ್ಲವನ್ನೂ ಪರಿಗಣಿಸಿದಾಗ ಒಂದು ರಾಷ್ಟ್ರ ಉದಾರವಾದಿಯಾಗಿ ಬೆಳೆಯಲು ಭಾಷಾ ವೈವಿಧ್ಯವನ್ನು ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಸೂಚಿಸುತ್ತದೆ.

ಸ್ವಾತಂತ್ರ್ಯಾನಂತರದ ಕಾಲದಲ್ಲಿ, ಉದಾರವಾದಿ ಎನ್ನಲಾಗುವ ಸರ್ಕಾರಗಳ ಕೆಳಗೆ ಮುಸ್ಲಿಂ ಸಮುದಾಯದ ಪ್ರಾತಿನಿಧ್ಯವನ್ನು ಮತ್ತು ಸಾಂಸ್ಕೃತಿಕ ವ್ಯಕ್ತಿತ್ವವನ್ನು ಗೌಣ ಮಾಡುತ್ತಾ ಬಂದಿರುವುದನ್ನು ಅನಿಲ್ ದಾಖಲಿಸುತ್ತಾರೆ. ಅವರು ಪರಿಶೀಲಿಸುವ ಕಾಲಘಟ್ಟದಲ್ಲಿ ವ್ಯಕ್ತವಾಗಿ ಯಾವ ರೀತಿಯ ದ್ವೇಷ ಮತ್ತು ಪ್ರಚೋದನೆಯಿರಲಿಲ್ಲವಾದರೂ, ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ನೋಡುವ ರೀತಿಯೇ ಭಿನ್ನವಾಗಿತ್ತು. ಪ್ರಸ್ತುತ ಸಂದರ್ಭದಲ್ಲಿ ಮಾತಿನ ಮಟ್ಟಿಗೂ ಅಲ್ಪಸಂಖ್ಯಾತರ ಸಾಂಸ್ಕೃತಿಕ ಮತ್ತು ಸಾಮಾಜಿಕ ಆಶೋತ್ತರಗಳನ್ನು ಪರಿಗಣಿಸುವ ಪ್ರಶ್ನೆಯೇ ಇಲ್ಲದಂತಾಗಿದೆ. ಬಹುಸಂಖ್ಯೆಯಲ್ಲಿದ್ದು ದಮನಿತರಾಗಿದ್ದ ದಲಿತರು ತಕ್ಕಮಟ್ಟಿಗೆ ಮುಖ್ಯಧಾರೆಯಲ್ಲಿ ಬಂದಿರುವುದರ ಹಿನ್ನೆಲೆಯಲ್ಲಿ ನೋಡಿದರೆ ನಾವು ಮುಸ್ಲಿಮರನ್ನು ಕಡೆಗಣಿಸಿ ಅಂಚಿಗೆ ಅಟ್ಟಿದ್ದೇವೆ. ದಲಿತರ ರಾಜಕೀಯ ಪ್ರಾತಿನಿಧ್ಯ ತುಸುಮಟ್ಟಿಗಾದರೂ ಇರುವುದಕ್ಕೆ ಬಹುಶಃ ಮೂರು ಕಾರಣಗಳಿವೆ. ಮೊದಲನೆಯದು ಗಾಂಧಿ, ನೆಹರೂರಂತಹ ಮೇರು ವ್ಯಕ್ತಿತ್ವಗಳನ್ನು ಪ್ರಶ್ನಿಸಿ ಸವಾಲೆಸೆದ ಅಂಬೇಡ್ಕರ್ ಮಟ್ಟದ ಆಧುನಿಕ ಮತ್ತು ಬುದ್ಧಿಜೀವಿ ನಾಯಕರು. ಮುಸ್ಲಿಂ ರಾಷ್ಟ್ರವಾದಿ ನಾಯಕರುಗಳು ರಾಜಿಯ ದಾರಿಯನ್ನು ಹಿಡಿದರೇ ವಿನಃ ಸವಾಲೆಸೆಯಲಿಲ್ಲ. ಸವಾಲೆಸೆದವರು ಮತ್ತೊಂದು ದೇಶ ಕಟ್ಟಿ ಪಾಕಿಸ್ತಾನಕ್ಕೆ ಹೋದರು, ಉಳಿದವರು ಸಂಪ್ರದಾಯವಾದಿಗಳಾಗಿ ಕಂಡರು. ಎರಡನೆಯ ಕಾರಣ, ಮೀಸಲಾತಿಯ ಮೂಲಕ ಮುಖ್ಯಧಾರೆಯಲ್ಲಿ ಭಾಗವಹಿಸಲು ಬಾಗಿಲುಗಳನ್ನು ತೆರೆದದ್ದು. ಈ ಎರಡನ್ನೂ ಮೀರಿದ್ದು, ದಲಿತರ ವಿರುದ್ಧ ಶೋಷಣೆಯನ್ನು ತಪ್ಪಿಸಲು ಇರುವ ಅಟ್ರಾಸಿಟೀಸ್ ಪ್ರಿವೆನ್ಷನ್ ಆಕ್ಟ್. ಅಲ್ಪಸಂಖ್ಯಾತರಾದ ಮುಸ್ಲಿಮರಿಗೆ ಈ ಯಾವುದೂ ದಕ್ಕಲಿಲ್ಲ. ಹಿಂದಿನ ‘ಉದಾರವಾದಿ’ ಸರ್ಕಾರಗಳಿಂದ ಸಿಕ್ಕದ ಈ ರಕ್ಷಣೆ ಮತ್ತು ಪ್ರೋತ್ಸಾಹ ಈಗಿನ ಸಂಕುಚಿತ ಹಿಂದೂವಾದಿ ಸರ್ಕಾರದಿಂದ ಹೇಗೆ ನಿರೀಕ್ಷಿಸುವುದು? ●